ಕಡೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಫಿಬ್ರವರೀ 1887.

ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರ.	'ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
Iನೇ ಬುಕ್ಕು ನಂಬರ್ 182 ———— 1884—85 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್	ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ವಾಸಸ್ತ ದೊಡ್ಡ ಕಾಡಯ್ಯನ ಮಲ್ಲಪ್ಪ	ತರೀಕೆರ ತಾಲ್ಲೂಕು ಬುಕ್ಕಾಂಬುದಿ ವಾಸಸ್ತ ಚನ್ನಯ್ಯನ ಮಗ ಮಲ್ಲಪ್ಪ 1, ಮುಪ್ಪಂಣನ ಚನ್ನಯ್ಯ 1	9ನೇ ಫಿಬ್ರವರೀ 1885ನೇ ಇಸವಿ	9ನೇ ಫಿಬ್ರವರಿ 85ನೇ ಇಸವಿ	ಬುಕ್ಕಾಂಬುದಿ ಹಸಬಾದಲ್ಲಿರುವ ರೆವಿನ್ಯೂ ಸರ್ವೆ ನಂಬರ್ 301ನೇ ಪೈಕಿ ಖುಷ್ಕಿ ಯಕರೆ ಎಕರೆ ಆಕಾರ ಎಂಟು ರೂಪಾಯಿನ ಜಮಾನನ್ನ 2 ರೂಪಾಯಿಗೆ ಕ್ರಯ.

ಜಿ. ಎಫ್. ಮೈಕಲ್ಜಾರ್,
ರಿಜಿಸ್ಟ್ರಾರ್.

ಸರ್ಕ್ಯುಲರ್.

ಮೈಸೂರ ಗೆಜೆಟ್ ಕಂಪೈಲರ್ ಯವರಿಂದ.

ಮೈಸೂರು ಕೀಮೆಯ ತಾಲ್ಲೂಕು ಜಾತ್ ಅಮಲ್ದಾರರುಗಳಿಗೆ.

ಮಲ್ಕಂ 1ನೇ ಮಾರ್ಚ್ 1887ನೇ ಇಸವಿ.

ತಾಲ್ಲೂಕು ಖಜಾನೆಗೆ ಗೆಜೆಟ್ ಚಂದಾ ವೊಬಲಗು ಪಾವತೀ ಮಾಡಲ್ಪಟ್ಟು ಆ ಬಾಬತು ಜಮೇ ಆದೆ ರಿಪೋರ್ಟುಗಳು ಕೆಲ ಸಂದರ್ಭಗಳಲ್ಲಿ ಮೈಸೂರ ಗೆಜೆಟ್ ಆಫೀಸಿಗೆ ಕೂಡ್ಲೇ ಕಳುಹಿಸಲ್ಪಡದೆ ಸಾವಕಾಶವಾಗಿರುವ ಸಂಗತಿ ತಿಳಿಯ ಬಂದಿರುವದರಿಂದ, ಕಂಪೈಲರವರು ಸೂಚಿಸುವದೇನಂದರೆ, ತಾಲ್ಲೂಕು ಅಮಲ್ದಾರರುಗಳು, ಚಂದಾ ವೊಬಲಗು ಪಾವತೀ ಮಾಡಲ್ಪಟ್ಟ ಒಡನೆ ಮುಖ್ಯವಾಗಿ ಹೊಸದಾದ ಚಂದಾ ದಾರರಿಂದ ವೊಬಲಗು ಬಂದ ಬಗ್ಗೆ ತಕ್ಷಣ ಈ ಆಫೀಸಿಗೆ ಮಾಮೂಲ್ ಮೇರೆ ತಿಳಿಸಬೇಕಾಗಿರುತ್ತೆ.

ಚಂದಾದಾರರ ಹೆಸರೂ ಮತ್ತು ವೊಬಲಗು ಜಮೇಆದ ರಿಪೋರ್ಟೂ ಯಿವು ಗೆಜೆಟ್ ಆಫೀಸಿಗೆ ತಲಪಿದ ಹೊರ್ತು ಗೆಜೆಟ್‌ಗಳು ಚಂದಾ ದಾರರುಗಳಿಗೆ ಕಳುಹಿಸಲ್ಪಡುವದಿಲ್ಲವಾಗಿ ಸಾವಕಾಶವಾದರೆ ಚಂದಾದಾರರಿಗೆ ಅತೃಪ್ತಿ ವುಂಟಾಗುವದರಿಂದ ಚಂದಾದಾರರು ನಿಂತು ಹೋಗುವದರಿಂದ ಸರಕಾರಕ್ಕೆ ನಷ್ಟವೂ ಸಂಭವಿಸುವದು.

ಶಿವಾಯಿ ಯಿದರೊಡನೆ ಕಳುಹಿಸಿರತಕ್ಕ ಪ್ರಕಟನೆ ಕಾಪಿಗಳನ್ನು ಸರ್ವರ ತಿಳುವಳಿಕೆ ಬಗ್ಗೆ ತಾಲ್ಲೂಕು ಕಚೇರಿಯ ಬಿಹಿರಂಗವಾದ ಸ್ಥಳದಲ್ಲಿಯೂ ಪ್ರತಿ ಕೇಕದಾರ್ ಹೋಬಳಿ ಕಚೇರಿ ಸ್ಥಳಗಳಲ್ಲೂ ತಗಲು ಹಾಕಿಸಬೇಕಾಗಿ ಸೂಚಿಸಿದೆ.

ಟಿ. ಟಿ. ಲೆನರ್ಡ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Press, Bangalore.—1887.